## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
## ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.

### ಸಿಸಿ ಸಂಖ್ಯೆ **785/2017**

**ಚಾಸಾಃ 3 ಪ್ರಾಸಾಃ 3**

ಹೆಸರು : ಸಿಸ್ಟರ್ ರಾಣಿ ಪುದುಪಳ್ಳಿ

ತಂದೆಯ ಹೆಸರು : ಜೋಸೆಫ್

ಪ್ರಾಯ : 56 ವರ್ಷ

ಉದ್ಯೋಗ : ಶಿಕ್ಷಕಿ

ವಾಸ :ತ್ರಿಶೂರ್, ಕೇರಳ

ದಿನಾಂಕ 1-4-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

2011 ರಿಂದ 2020 ರವರೆಗೆ ಅಳದಂಗಡಿಯ ಸೈಂಟ್ ಪೀಟರ್ ಕ್ಲೇವರ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕಿಯಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 24-5-2017 ರಂದು ತಕ್ಷೀರು ಸ್ಥಳದಲ್ಲಿ ಹಾಕಿರುತ್ತೇನೆ. ಕಳ್ಳತನಕ್ಕೆ ಸಂಬಂಧಿಸಿದಂತೆ ಪೊಲೀಸರು ಬಂದು ತಪಾಸಣೆ ಮಾಡಿದ್ದು ಆ ಸಂದರ್ಭದಲ್ಲಿ ಸದರಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗೆ ನಾನು, ಚಾಸಾ-1 ರವರು ಸಹಿ ಮಾಡಿರುತ್ತೇನೆ. ಮಹಜರನ್ನು ಯಾವ ಸಮಯ ಬರೆಯಲಾತು ಎಂದು ನೆನಪಿರುವುದಿಲ್ಲ. ದಿನಾಂಕ 24-5-2017 ರಂದು ಬೆಳಗ್ಗೆ 8 ಗಂಟೆ ಸಮಯಕ್ಕೆ ನಾನು ಚರ್ಚಿನಲ್ಲಿದ್ದಾಗ ಚಾಸಾ-2 ರವರು ಬಂದು ಕಳ್ಳತನದ ಬಗ್ಗೆ ಮಾಹಿತಿ ನೀಡಿದ್ದು ನಾನು ಮತ್ತು ಚಾಸಾ-1 ರವರು ಹೋಗಿ ನೋಡಿದಾಗ ಶಾಲೆಯ ಗೇಟ್ ಮತ್ತು ಕಛೇರಿಯ ಬೀಗವನ್ನು ತೆಗೆಯಲಾಗಿತ್ತು. ನಾವು ನೋಡಿದಾಗ ಶಾಲೆಯ ಕಪಾಟಿನಲ್ಲಿದ್ದ ರೂ. 46,000 ಹಣ ಕಳುವಾಗಿರುತ್ತದೆ. ಈ ಬಗ್ಗೆ ಚಾಸಾ-1 ರವರು ಪೊಲೀಸರಿಗೆ ದೂರು ನೀಡಿರುತ್ತಾರೆ. ತಕ್ಷೀರು ನಡೆದ 2 ತಿಂಗಳ ನಂತರ ಪೊಲೀಸರು 1 ನೇ ಆರೋಪಿಯನ್ನು ಕರೆದುಕೊಂಡು ಬಂದಾಗ ನಾನು ನೋಡಿರುತ್ತೇನೆ. ಕಳುವಾದ ಹಣದ ಪೈಕಿ ರೂ. 5000 ವಾಪಸ್ಸ ಸಿಕ್ಕಿರುತ್ತದೆ. ಘಟನೆ ಬಗ್ಗೆ ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುತ್ತೇನೆ. ವಾಪಸ್ಸು ಸಿಕ್ಕ ಹಣವನ್ನು

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-2.pdf

www.ecourtsindia.com

ಸಾಕ್ಷಿನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಒ-2 ರಿಂದ 11 ಎಂದು ಗುರುತಿಸಲಾಗಿರುತ್ತದೆ. ನಿಪಿ-6 ರಲ್ಲಿರುವ ಆರೋಪಿಯನ್ನು ಪೊಲೀಸರು ಶಾಲೆಗೆ ಕರೆದುಕೊಂಡು ಬಂದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಪಿ ಎಂ ವಕೀಲರಿಂದಃ</u>

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಒಂದು ಬಾರಿ ವಿಚಾರಣೆ ಮಾಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸ್ ಠಾಣೆಗೆ ಎಷ್ಟು ಬಾರಿ ಹೋಗಿರುತ್ತೇನೆಂದು ನೆನಪಿರುವುದಿಲ್ಲ. ನಾನು ಹಾಗೂ ಚಾಸಾ-1 ರವರು ಒಟ್ಟಿಗೆ ಇದ್ದಾಗ ಚಾಸಾ-2 ರವರು ಖುದ್ದಾಗಿ ಬಂದು ವಿಚಾರವನ್ನು ತಿಳಿಸಿರುತ್ತಾರೆ. ವಿಚಾರ ತಿಳಿದ ಕೂಡಲೇ ಶಾಲೆಯ ಆಡಳಿತ ವರ್ಗದ ಮುಖ್ಯಸ್ಥರು ಠಾಣೆಗೆ ಹೋಗಿ ದೂರನ್ನು ನೀಡಿದ್ದಾರೋ ಇಲ್ಲವೋ ಗೊತ್ತಿರುವುದಿಲ್ಲ. ತಕ್ಷೀರು ನಡೆದ ದಿನವೇ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ, ಆದರೆ ಎಷ್ಟು ಗಂಟೆ ಸಮಯಕ್ಕೆ ಎಂದು ನೆನಪಿರುವುದಿಲ್ಲ. ಪೊಲೀಸರು ಸ್ಥಳದಲ್ಲಿ ತಪಾಸಣೆ ನಡೆಸಿ ವರದಿ ಬರೆದಿರುತ್ತಾರೆ. ಪೊಲೀಸರು ಮದ್ಯಾಹ್ನ 12 ಗಂಟೆ ವರೆಗೆ ಸ್ಥಳದಲ್ಲಿದ್ದರು. ನಿಪಿ-2 ನ್ನು ಪೊಲೀಸರು ಬರವಣಿಗೆ ಮಾಡಿರುತ್ತಾರೆ. ಎಷ್ಟು ಜನ ಪೊಲೀಸರು ಬಂದಿದ್ದರು ಎಂದು ನೆನಪಿರುವುದಿಲ್ಲ. ಪೊಲೀಸರು ಸ್ಥಳಕ್ಕೆ ಬಂದಾಗ ನಾನು, ಮತ್ತು ಚಾಸಾ-1 ರವರು ಇದ್ದೆವು ಬೇರೆ ಯಾರು ಇದ್ದರೆಂದು ನೆನಪಿರುವುದಿಲ್ಲ. ಪೊಲೀಸರು ಸ್ಥಳದಿಂದ ಏನನ್ನೂ ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ಸಷ್ಟವಾಗಿ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಶಾಲೆಯ ಚಕ್ಕು ಬಂದಿ ನೆನಪಿರುವುದಿಲ್ಲ. ಈ ಬಗ್ಗೆ ನಿಪಿ-2 ರಲ್ಲಿ ನಮೂದು ಮಾಡಿರುವುದಿಲ್ಲ. ಪೊಲೀಸರು ಹೇಳಿದ ಕಾರಣದಿಂದ ಆರೋಪಿಗಳು ತಕ್ಷೀರು ನಡೆಸಿರುತ್ತಾರೆಂದು ಹೇಳುತ್ತಿದ್ದೇನೆ ಎಂದರೆ ಸರಿ.

ಎಂಒ-2 ರಿಂದ 11 ರ ಕ್ರಮ ಸಂಖ್ಯೆಯನ್ನು ಲೆಕ್ಕದ ಪುಸ್ತಕದಲ್ಲಿ ಬರೆದಿಟ್ಟಿರುತ್ತೇವೆ ಸದರಿ ಪುಸ್ತಕವನ್ನು ನಾನು ತನಿಖಾಧಿಕಾರಿಯವರಿಗೆ ನೀಡಿರುವುದಿಲ್ಲ. ಎಂಒ-2 ರಿಂದ 11 ರಲ್ಲಿ ನಿರ್ಧಿಷ್ಟ ಗುರುತುಗಳನ್ನು ಮಾಡಿಕೊಂಡಿರುವುದಿಲ್ಲ, ಪೊಲೀಸರು ಹೇಳಿದ ಮೇರೆಗೆ ಹೇಳುತ್ತಿದ್ದೇನೆ ಎಂದರೆ ಸರಿ. ನಿಪಿ-2 ರಲ್ಲಿರುವ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ ಶಾಲೆಯಲ್ಲಿ ಹಾಕಿರುತ್ತೇನೆ. ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಯಾವುದೇ ಮಹಜರ್ ಮಾಡಿರುವುದಿಲ್ಲ ಹಾಗೂ ನನ್ನ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-2.pdf

ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎಂಒ-2 ರಿಂದ 11 ಕ್ಕೂ ಪ್ರಕರಣಕ್ಕೂ ಮತ್ತು ಆರೋಪಿಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪತ್ತೆಯಾಗದ ಪ್ರಕರಣದಲ್ಲಿ ಆರೋಪಿಗಳನ್ನು ಪೊಲೀಸರು ಸಿಲುಕಿಸಿದ್ದು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

**(ಸಾ. ಓ. ಹೇ. ಕೇ. ಸ. ಇ. ಎ. ಒ.)**

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-2.pdf